## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 699/2024 **RW**-1

**ದಿಃ02.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲುಃ ಅರ್ಜಿದಾರ ಪರ ವಕೀಲರಾದ ಶ್ರೀಮತಿ ಪಿ ಆರ ಬಿ ರವರಿಂದ.**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಅಪಘಾತ ಆದ ಸಮಯದಲ್ಲಿ ಕೆಎಸಆರಟಿಸಿ ಬಸ್ಸ ನಂಬರ ಕೆಎಃ31/ಎಫ/1559 ಈ ವಾಹನಕ್ಕೆ ನಾನೇ ಚಾಲಕನಿದ್ದೆ ಎಂದರೆ ಸರಿ. ಬಸ್ಸನ್ನು ಚಾಲನೆ ಮಾಡಬೇಕಾದರೆ ನಾವು ಸದರಿ ವಾಹನವನ್ನು ಪರಿಶೀಲನೆ ಮಾಡಿ ಅದು ಸರಿಯಾದ ಕಂಡಿಷನಲ್ಲಿ ಇದೆ ಎಂದು ಗೊತ್ತಾದ ನಂತರವೆ ಚಾಲನೆ ಪ್ರಾರಂಭ ಮಾಡುತ್ತೇವೆಂದರೆ ಸರಿ. ನಾನು ಅತೀ ವೇಗವಾಗಿ ಬಸ್ಸನ್ನು ಚಲಾಯಿಸಿದ್ದರಿಂದ ಬಸ್ಸನ ಟಾಯರ್ ಬಸ್ಟ ಆಗಿ ಬಸನ ಒಳಗಡೆ ಇದಂತಹ ಅರ್ಜಿದಾರರಿಗೆ ಗಾಯಗಳಾಗಿವೆ ಎಂದರೆ ಹೌದು ಎಂದು ಸಾಕ್ಷಿ ನುಡಿಯುತ್ತಾರೆ. ದೋಷಾರೋಪಣೆ ಪಟ್ಟಿಯಲ್ಲಿ ನನ್ನ ನಿರ್ಲಕ್ಷತನ ಇದೆ ಎಂದು ನನ್ನನ್ನು ಆರೋಪಿಯಾಗಿ ಸೇರಿಸಿರುತ್ತಾರೆಂದರೆ ಸಾಕ್ಷಿ ಅದರಲ್ಲಿ ನನ್ನದು ಎನು ತಪ್ಪಿಲ್ಲ ಎನ್ನುತ್ತಾರೆ. ಅರ್ಜಿದಾರರಿಗೆ ಸಣ್ಣ-ಪುಟ್ಟ ಗಾಯಗಳಾಗಿದೆ ಎಂದು ಹೇಳಿದ್ದು ಅವರು ಯಾವ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎಂದು ಮಾಹಿತಿ ಇದೇಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿಯವರಿಗೆ ಸಣ್ಣ-ಪುಟ್ಟ ಗಾಯಗಳಾಗಿವೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದರಿಂದ ನಾನು ಅಂಬುಲೈನ್ಸ ಮೂಲಕ ಕಳುಹಿಸಿರುತ್ತೇನೆಂದರೆ ಸಾಕ್ಷಿ ಸಣ್ಣ-ಪುಟ್ಟ ಗಾಯಗಳಾಗಿದ್ದವು ಎನ್ನುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಎಲ್ಲವು ಸುಳ್ಳಿನಿಂದ ಕೂಡಿವೆ ಅದಕ್ಕೆ ಸಂಬಂದಿಸಿದಂತೆ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸರಿಯಲ್ಲ. ಆ ಕಾರಣಕ್ಕೆ ನಾವು ಮತ್ತು ನಮ್ಮ ಸಂಸ್ಥೆಯವರು ಪರಿಹಾರ ಕೊಡಲು ಬಾಧ್ಯಸ್ಥರು ಎಂದರೆ ಸಾಕ್ಷಿ ಅದರಲ್ಲಿ ನನ್ನದು ಎನು ತಪ್ಪು ಇಲ್ಲ ಎನ್ನುತ್ತಾರೆ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ